ಮುಖ್ಯಮಂತ್ರಿಗಳ ಹೇಳಿಕೆ

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಕೊಡಗು ಜಿಲ್ಲೆಯಲ್ಲಿ ಜಮ್ಮಾ ಬಾಣೆ ಭೂಮಿಯ ವಿಷಯದಲ್ಲಿ ಅಲ್ಲಿಯ ಕೃಷಿಕರ ಹೋರಾಟದ ಹಿನ್ನೆಲೆಯಲ್ಲಿ ಆ ಭಾಗದಿಂದ ಬಂದಿರತಕ್ಕಂಥ ಶಾಸಕ ಮಿತ್ರರು ಕಳೆದ ಎರಡು ದಿವಸಗಳಿಂದ ಈ ವಿಷಯದಲ್ಲಿ ಏನು ಚರ್ಚೆಯನ್ನು ಮಾಡಿದ್ದಾರೆ, ಆ ವಿಷಯದ ಬಗ್ಗೆ ಇವತ್ತು ಬೆಳಿಗ್ಗೆ ನಾನು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆಯನ್ನು ಕರೆದು 2004, 2006 ಮತ್ತು 2007ನೇ ಇಸವಿಯಲ್ಲಿ ಸರ್ಕಾರ ಹೊರಡಿಸಿದ 3 circular ಗಳನ್ನು ವಾಪಸ್ಸು ಪಡೆಯುವುದರ ಮೂಲಕ, ಕಂದಾಯ ಇಲಾಖೆ, ಅರಣ್ಯ ಇಲಾಖೆಯ ಅಧಿಕಾರಿಗಳು, ಆ ಭಾಗದಿಂದ ಬಂದಿರುವ ಜನಪ್ರತಿನಿಧಿಗಳು ಮತ್ತು ಅಲ್ಲಿಯ ಕೆಲವು ಪ್ರಮುಖರು ಸೇರಿದಂತೆ ಒಂದು ಸಮಿತಿಯನ್ನು ರಚನೆ ಮಾಡಿ, ಮುಂದಿನ ಸೋಮವಾರದಿಂದಲೇ ಈ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವ ನಿಟ್ಟಿನಲ್ಲಿ ಕೆಲವು ತೀರ್ಮಾನಗಳನ್ನು ಮಾಡಲಿಕ್ಕೆ, Supreme Court, High Courtನ ಕೆಲವು ಆದೇಶಗಳು, ತೀರ್ಪುಗಳು ಏನಿವೆ, ಅವುಗಳ ಹಿನ್ನೆಲೆಯೊಳಗೆ ಮತ್ತು ಈ ವಿಷಯದಲ್ಲಿ ಶಾಶ್ವತವಾಗಿ ಅಲ್ಲಿಯ ಭಾಗದ ಈ ಒಂದು ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಮೂರು circularಗಳನ್ನು ಹಿಂದಕ್ಕೆ ಪಡೆದಿದ್ದೇವೆ. ಅದರ ಜೊತೆಗೆ ಇವತ್ತಿನ BAC ಮೀಟಿಂಗ್‌ನಲ್ಲಿ ನಮ್ಮ ಜಯಪ್ರಕಾಶ್ ಹೆಗ್ಡೆಯವರು ಕುಮ್ಕಿ ಜಮೀನುಗಳ ಬಗ್ಗೆಯೂ ಚರ್ಚೆ ಮಾಡಿದ್ದಾರೆ. ಅದನ್ನೂ ಕೂಡ ಆ ಕಮಿಟಿಗೆ ಇವತ್ತು ನಾವು ತರುವುದರ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಜನ ಪ್ರತಿನಿಧಿಗಳನ್ನು ಆ ಕಮಿಟಿಗೆ ಸೇರಿಸಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ..

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ನಮ್ಮ ಮಲೆನಾಡು ವಿಭಾಗದ ಪಶ್ಚಿಮಘಟ್ಟ ಪ್ರದೇಶವನ್ನು ಸೇರಿಸಬೇಕು.

(ಗೊಂದಲ)

ಶ್ರೀ ಹೆಚ್.ಎಂ.ವಿಶ್ವನಾಥ್ : ಚಿಕ್ಕಮಗಳೂರು ಭಾಗದಲ್ಲಿರು ವಂಥದ್ದನ್ನು ಇದಕ್ಕೆ ಸೇರಿಸಿಕೊಳ್ಳಬೇಕು. ಎಲ್ಲಾ ಕಡೆ ಒಂದೇ ಸಮಸ್ಯೆ ಇದೆ. ಅವರು ಬಾಣೆ ಎಂದು ಹೇಳಿದರೆ ನಾವು ಒತ್ತುವರಿ ಎಂದು ಹೇಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಆ ಸಮಸ್ಯೆ ಬೇರೆ, ಈ ಸಮಸ್ಯೆ ಬೇರೆ, ಎಲ್ಲ ಕ್ಲಬ್ ಮಾಡಿ.

(ಗೊಂದಲ)

ಶ್ರೀ ಹೆಚ್.ಎಂ.ವಿಶ್ವನಾಥ್ : ಅವರು ಕಾಣೆ, ಬಾಣೆ ಎನ್ನುತ್ತಾರೆ, ನಾವು ಒತ್ತುವರಿ ಎನ್ನುತ್ತೇವೆ ಅಷ್ಟೇ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿ) : ಈ ಒಂದು ವಿಷಯದಲ್ಲಿ ಕಳೆದ 50 ವರ್ಷಗಳಿಂದ ಇರುವ ಈ ಸಮಸ್ಯೆ ಏನಿದೆ, ಇದಕ್ಕೊಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕೆಂದು ಇವತ್ತೇನು ತೀರ್ಮಾನ ಮಾಡಿದ್ದೇವೆ, ಸದನದಲ್ಲಿ ಈ ವಿಷಯದಲ್ಲಿ ನಮ್ಮ ಸದಸ್ಯರೇನು ಕಳವಳವನ್ನು ವ್ಯಕ್ತಪಡಿಸಿದರು, ಈ ಒಂದು ವಿಷಯದಲ್ಲಿ ತೀರ್ಮಾನ ಬಂದಿರುವುದನ್ನು ಸಭೆಯ ಗಮನಕ್ಕೆ ತರುತ್ತಾ ಇದನ್ನು ಇಲ್ಲಿಗೇ ಮುಕ್ತಾಯ ಮಾಡಿ ಮುಂದಿನ ಕಾರ್ಯಕ್ರಮವನ್ನು ಪ್ರಾರಂಭ ಮಾಡೋಣವೆಂದು ಮನವಿ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ನಾವು ಹೇಳುವುದೇನೆಂದರೆ, ಮುಖ್ಯಮಂತ್ರಿಗಳು ಸದನದ ವಾಸ್ತವ್ಯ ಮಾಡಬೇಕು. ಅವರು ಸದನದಲ್ಲಿದ್ದಾರೆ, ಪ್ರಶ್ನೆಗಳು ಬರುತ್ತವೆ. ಇವತ್ತು ಸದನಕ್ಕೆ ಬಂದಿರಿ.

ಅಧ್ಯಕ್ಷರು : ಸದನದಲ್ಲಿ ವಾಸ್ತವ್ಯ ಮಾಡಿ ಎಂದು ನೀವು ಹೇಳುತ್ತಿರುವುದು.

ಶ್ರೀ ಧರ್ಮಸಿಂಗ್ : ಸದನದಲ್ಲಿ ವಾಸ್ತವ್ಯ ಮಾಡಿದರೆ ಸರಿ ಹೋಗುತ್ತದೆ.

ಅಧ್ಯಕ್ಷರು : ಒಳ್ಳೆಯ ಸಲಹೆ.

ಶ್ರೀ ಎನ್.ಧರ್ಮಸಿಂಗ್ : ಎಲ್ಲಾ ಸುತ್ತೋಲೆ ವಾಪಸ್ಸು ತೆಗೆದು ಕೊಂಡರೂ ಇದಕ್ಕೆ ಅಮೆಂಡ್‌ಮೆಂಟ್ ಬೇಕಾಗುತ್ತದೆ. ಸಮಾಲೋಚನೆ ಮಾಡತಕ್ಕಂಥ ಆಶ್ವಾಸನೆ ಕೊಟ್ಟಿದ್ದೀರಿ ಮತ್ತು ಅವರು 30 ನೇ ತಾರೀಖು ಜಾಥಾ ಬರುತ್ತೇವೆಂದು ಹೇಳಿದ್ದರು. ಪ್ರತಿಭಟನೆಯಾಗುತ್ತಿತ್ತು. ಅದನ್ನು

ತಪ್ಪಿಸುವ ಒಳ್ಳೆಯ ನಿರ್ಣಯ ತೆಗೆದುಕೊಂಡಿದ್ದೀರಿ. ಎಲ್ಲೆಲ್ಲಿ ಒಳ್ಳೆಯ ನಿರ್ಣಯ ತೆಗೆದುಕೊಳ್ಳುತ್ತೀರಿ, ಆಗೆಲ್ಲ ನಾವು ನಿಮ್ಮ ಜೊತೆಯಲ್ಲಿರುತ್ತೇವೆ. ನೀವು ಹಾರಿಕೆ, ಘೋಷಣೆಗಳನ್ನು ಹೇಳಿದರೆ ಅಲ್ಲಿ ನಾವು ಸಹಕಾರ ಕೊಡಲಿಕ್ಕಾಗುವುದಿಲ್ಲ. ಆದರೆ, ನೀವು ಒಳ್ಳೆಯ ನಿರ್ಣಯ ತೆಗೆದುಕೊಂಡಿದ್ದೀರಿ. ನಾನೂ ಕೂಡ ಆ ಹೋರಾಟ ಸಮಿತಿ, ಇಲ್ಲಿರುವ ಶಾಸಕರ ಕಡೆಯಿಂದ ಅಭಿನಂದನೆ ಸಲ್ಲಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ನಿಮ್ಮ ಪರವಾಗಿ. . . .

(ಗೊಂದಲ)

ಎಲ್ಲ ನಿಂತುಕೊಂಡು ಮಾತನಾಡಿದರೆ ಹೇಗೆ?

(ಗೊಂದಲ)

ಯಾರು ಮಾತನಾಡುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ. ಅಲ್ಲಿ ಯಾವುದೂ ರೆಕಾರ್ಡ್‌ಗೆ ಹೋಗುತ್ತಿಲ್ಲ.

(ಗೊಂದಲ)

ಬೋಪಯ್ಯನವರೆ, ಎಲ್ಲರ ಪರವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು : ಅವರು ನಮ್ಮ ಪರವಾಗಿ ಮಾತನಾಡಿದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಇವತ್ತು ಕೊಡಗು ಜನತೆಗೆ ಮರೆಯಲಾರದಂಥ ರೀತಿಯಲ್ಲಿ ಒಳ್ಳೆಯ ಕೆಲಸವನ್ನು ಈ ಸರ್ಕಾರ ಮಾಡಿಕೊಟ್ಟಿದೆ. ಬಹಳಷ್ಟು ದಿವಸಗಳಿಂದ ಕೊಡಗು ಜನತೆ ಸರ್ಕಾರದ ಈ ನಿರ್ಧಾರವನ್ನು ನಿರೀಕ್ಷೆ ಮಾಡುತ್ತಿದ್ದರು. ಇವತ್ತು ಸರ್ಕಾರ ಆ ನಿರೀಕ್ಷೆಗೆ ಸ್ಪಂದಿಸಿದೆ. ಆ ಜನತೆಯ ಆಶೋತ್ತರಕ್ಕನುಗುಣವಾಗಿ ಎಲ್ಲಾ ಮೂರು ಸುತ್ತೋಲೆಗಳನ್ನೂ ವಾಪಸ್ಸು ಪಡೆಯುವುದರ ಮೂಲಕ ಅಲ್ಲಿಯ ಜನತೆಗೆ ಹರ್ಷವನ್ನು ತಂದಿದೆ. ಆ ಜನತೆಯ ಪರವಾಗಿ ನಾನು ಈ ಸರ್ಕಾರಕ್ಕೆ ಆಭಾರಿಯಾಗಿದ್ದೇನೆ. ವಿಶೇಷವಾಗಿ, ಮುಖ್ಯಮಂತ್ರಿಗಳಿಗೆ, ವಿರೋಧ ಪಕ್ಷದ ನಾಯಕರು ಮತ್ತು ಈ ಸದನದ ಎಲ್ಲ ಸದಸ್ಯರಿಗೆ ನಾನು ಆಭಾರಿಯಾಗಿದ್ದೇನೆ. ಆದರೆ, ನಾನು ಇವತ್ತು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ, 30ರಂದು ಕೊಡಗು ಜನತೆಗೆ ವಿಧಾನ ಸೌಧ ಚಲೋ ಮಾಡಬೇಕೆಂದು ಇದ್ದಾರೋ, ಅದನ್ನು ಕೈಬಿಡುವಂಥ ವಿಚಾರವನ್ನು ಕೂಡ

ಮುಖ್ಯಮಂತ್ರಿಗಳು ಈ ಸದನದಲ್ಲಿ ಹೇಳಬೇಕೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎ.ಜೀವಿಜಯ : ಈಗೇನು ಕೊಡಗು ಜಿಲ್ಲೆಯ ಜ್ವಲಂತ ಸಮಸ್ಯೆ ಇತ್ತು ಇದು ಬಹಳ ವರ್ಷಗಳಿಂದ ಇತ್ತು. ಈಗ ಕಂದಾಯ ಇಲಾಖೆಯವರು ಹೊರಡಿಸಿದ ಎರಡು ಸುತ್ತೋಲೆಗಳು ಮತ್ತು ಅರಣ್ಯ ಇಲಾಖೆಯವರು 2004ನೇ ಇಸವಿಯಲ್ಲಿ ಹೊರಡಿಸಿದ ಸುತ್ತೋಲೆ ಇದು. ಇದು ಕೊಡಗಿನ ಜನರ ಬದುಕಿಗೆ ಮಾರಕವಾಗಿ ಪರಿಣಮಿಸಿತ್ತು. ಅವರು ಬಹಳ ದುಃಖ, ದುಮ್ಮಾನದಿಂದ ನಮ್ಮ ಬದುಕಿಗೆ ಏನಾಗುತ್ತದೋ ಎಂಬ ಭೀತಿಯ ವಾತಾವರಣದಲ್ಲಿದ್ದರು. ಆದರೆ, ಈ ದಿವಸ ಮುಖ್ಯಮಂತ್ರಿಯವರು ಸದ್ಭಾವನೆಯಿಂದ ಕೊಡಗಿನ ಜ್ವಲಂತ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಆಶ್ವಾಸನೆ ಕೊಟ್ಟಿದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ನಮ್ಮ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರಾದ ಧರ್ಮಸಿಂಗ್‌ರವರು, ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಉಸ್ತುವಾರಿ ಮಂತ್ರಿಯವರು ಎಲ್ಲರೂ ಕೂಡ ಸಹಕರಿಸಿದ್ದಾರೆ. ಅವರೆಲ್ಲರಿಗೂ ಕೂಡ ನಮ್ಮ ಕೊಡಗಿನ ಜನರ ಪರವಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ : ಕಳೆದ ಸುಮಾರು ಮೂರು ವರ್ಷಗಳಿಂದ ಈ ಜ್ವಲಂತ ಸಮಸ್ಯೆ ಬಗ್ಗೆ ಅನೇಕ ಬಾರಿ ನಾವು ಸರ್ಕಾರದ ಮುಂದೆ ಮನವಿ ಮಾಡಿದ್ದೆವು. 2004ರ ಸುತ್ತೋಲೆ ಏನು ಮೊದಲಿಗೆ ಪ್ರಾರಂಭವಾಗಿತ್ತು ಅಲ್ಲಿಂದ ಆ ಸಮಸ್ಯೆ ಉಂಟಾಗಿತ್ತು. ಅದರ ನಂತರ ಮತ್ತೆರಡು ಸುತ್ತೋಲೆಗಳು ಒಂದರ ಮೇಲೊಂದು ಬಂದು ಸಾಕಷ್ಟು ಸಭೆಗಳನ್ನು ನಡೆಸಿದರೂ ಕೂಡ ಇತ್ಯರ್ಥವಾಗದೇ, ಇವತ್ತು ಮಾನ್ಯ ಮುಖ್ಯಮಂತ್ರಿಯವರು, ನಮ್ಮ ಎಲ್ಲಾ ಸಮಸ್ಯೆಯನ್ನು ಆಲಿಸಿ, ಜನಪರವಾದ ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸಿ ಜಿಲ್ಲೆಗೆ ಮಾರಕವಾಗಿದ್ದ ಮೂರು ಸುತ್ತೋಲೆಗಳನ್ನು ವಾಪಸ್ಸು ಪಡೆಯುವಂಥ ಒಂದು ದಿಟ್ಟ ತೀರ್ಮಾನವನ್ನು ಕೈಗೊಂಡಿದ್ದಾರೆ. ಹಾಗೆಯೇ, ಆ ತೀರ್ಮಾನಕ್ಕೆ ವಿಶೇಷವಾಗಿ, ಕಂದಾಯ, ಅರಣ್ಯ ಸಚಿವರು, ನಮ್ಮ ಜಿಲ್ಲೆಯನ್ನು ಪ್ರತಿನಿಧಿಸುವಂಥ ಉನ್ನತ ಶಿಕ್ಷಣ ಸಚಿವರು, ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು, ಎಲ್ಲರೂ ಸೇರಿ ವಿಶೇಷವಾಗಿ ಕಾನೂನು ಸಚಿವರು ಬಹಳಷ್ಟು ಪ್ರಯತ್ನಪಟ್ಟು ಈ ಸುತ್ತೋಲೆಯನ್ನು ಇವತ್ತು ವಾಪಸ್ಸು ಪಡೆಯಲಾಗಿದೆ. ಅದೇ ರೀತಿಯಲ್ಲಿ, ನಮ್ಮ ವಿರೋಧ ಪಕ್ಷದ ನಾಯಕರು, ಇಲ್ಲಿಯ ಎಲ್ಲ floor leaders ಕೂಡ

ನಮಗೆ ಸಹಕಾರ ಕೊಟ್ಟಿದ್ದಾರೆ. ತಮ್ಮೆಲ್ಲರಿಗೂ ಕೂಡ ನಾನು ಜಿಲ್ಲೆಯ ಜನತೆಯ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮುಂದೆ ಈ ಸಮಸ್ಯೆ ಏನಿದೆ, ಅದು ಇತ್ಯರ್ಥವಾಗುವಲ್ಲಿ ಆದಷ್ಟು ಶೀಘ್ರ ಕ್ರಮವನ್ನು ಕೈಗೊಳ್ಳಬೇಕೆಂಬ ಮನವಿಯನ್ನು ಮಾಡುತ್ತೇನೆ. 30ನೇ ತಾರೀಖು ಕೊಡಗು ಬಂದ್ ಮಾಡಿ ಈ ಕಡೆ ಬರಬೇಕೆಂದು ತೀರ್ಮಾನ ಮಾಡಿದ್ದೇವೆ, ಅದನ್ನು ಹಿಂತೆಗೆದುಕೊಳ್ಳಲಿಕ್ಕೆ ಮಾನ್ಯ ಮುಖ್ಯಮಂತ್ರಿಯವರು ಆ ಇಡೀ ಜನತೆಯನ್ನು ವಿನಮತಿ ಮಾಡಬೇಕೆಂದು ಮುಖ್ಯಮಂತ್ರಿಯವರಿಗೆ ವಿನಂತಿಸಿ, ಎಲ್ಲರಿಗೂ ಅಭಿನಂದಿಸಿ, ನನ್ನ ಮಾತು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : 30ನೇ ತಾರೀಖು ಕೊಡಗು ಜಿಲ್ಲೆಯಿಂದ ಒಂದು ಪ್ರತಿಭಟನಾ ರ್ಯಾಲಿಯನ್ನು ಅಲ್ಲಿಯ ಜನತೆ ಏನು ಹಮ್ಮಿಕೊಂಡಂಥ ಒಂದು ಸಂದರ್ಭವೇನಿತ್ತು, ಆ ವಿಷಯವಾಗಿ ಈಗಾಗಲೇ ಸರ್ಕಾರ ಕ್ರಮವನ್ನು ತೆಗೆದುಕೊಂಡಿರುವುದರಿಂದ, ಕೊಡಗು ಜಿಲ್ಲೆಯ ಜನರಲ್ಲಿ ನಾನು ಈ ಸದನದ ಮೂಲಕ ವಿಶೇಷವಾದ ಮನವಿಯನ್ನು ಮಾಡುತಿದ್ದೇನೆ. 30ನೇ ತಾರೀಖಿನ ಪ್ರತಿಭಟನಾ ರ್ಯಾಲಿಯನ್ನು ಅವರು ಕೈಬಿಡುವ ಮೂಲಕ ಸರ್ಕಾರ ತೆಗೆದುಕೊಂಡಿರುವ ನಿರ್ಧಾರವನ್ನು ಬೆಂಬಲಿಸುತ್ತಾರೆಂಬ ವಿಶ್ವಾಸದಿಂದ ಇವತ್ತು ಸದನದ ಮುಖಾಂತರ ಅಲ್ಲಿಯ ಜನತೆಗೆ ಈ ಪ್ರತಿಭಟನೆಯನ್ನು ಕೈಬಿಡಬೇಕೆಂದು ಮನವಿ ಮಾಡುತ್ತಿದ್ದೇನೆ.

2. ವಿತ್ತೀಯ ಕಾರ್ಯಕಲಾಪ : 2007–08ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಈಗಾಗಲೇ ಈ ಕೊಡಗಿನ ಜ್ವಲಂತ ಸಮಸ್ಯೆಯನ್ನು ನಗೆಪರಿಸಿ ಒಂದು ತಿಳಿ ವಾತಾವರಣ ಸದನದಲ್ಲಿ ಸೃಷ್ಟಿಯಾಗಿದೆ. 2007–08ರ ಬಜೆಟ್ ಮೇಲೆ ವಿರೋಧ ಪಕ್ಷದ ನಾಯಕರು ಮತ್ತು ಸದನದ ಎಲ್ಲ ಸದಸ್ಯರೂ ಸಾಕಷ್ಟು ಹೇಳಿದ್ದಾರೆ ಮತ್ತು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅವರು ಪ್ರಸ್ತಾಪ ಮಾಡಿದಂಥ ವಿಷಯಗಳನ್ನೇ ಹೆಚ್ಚಾಗಿ ಪ್ರಸ್ತಾಪ ಮಾಡದೇ ಯಾವ ವಿಷಯಗಳು ಹೆಚ್ಚಿನ ರೀತಿಯಲ್ಲಿ ಇಲ್ಲಿ ಬೆಳಕಿಗೆ ಬರಲಿಲ್ಲ ಅಥವಾ ಅವುಗಳ ಬಗ್ಗೆ ಹೆಚ್ಚು ಬೆಳಕು ಚೆಲ್ಲುತಕ್ಕಂಥದ್ದಾಗಲಿಲ್ಲ, ಅದರ ಬಗ್ಗೆ ನಾನು ನನ್ನ